॥ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

॥ ಶ್ರೀಮಧ್ವರಾಜಗುರುಭ್ಯೋ ನಮಃ ॥

॥ ಶ್ರೀವಾದಿರಾಜಗುರುಭ್ಯೋ ನಮಃ ॥

# ॥ ಶ್ರೀ ಟೀಕಾರಾಯರು ॥

# (ಶ್ರೀ ಜಯತೀರ್ಥರು)

# (ಶ್ರೀ ಇಂದ್ರಾಂಶರು)

ಮಿಥ್ಯಾ ಸಿದ್ಧಾಂತ ದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ ।

ಜಯತೀರ್ಥ ತರಣಿರ್ಭಾಸಿತಾಂ ನೋಹೃದಂಬರೇ ॥

## ಎದುರಾರೊ ಗುರುವೆ ಸಮರಾರೋ

ರಾಗ – ಆನಂದಭೈರವಿ

ಎದುರಾರೊ ಗುರುವೆ ಸಮರಾರೋ ॥ ಪ ॥

ಮದನಗೋಪಾಲನ ಪ್ರಿಯ ಜಯರಾಯ ॥ ಅ । ಪ ॥

ಕಡುಗರ್ಜಿಸುವ ಕೇಸರಿಯಂತೆ ನಿಮ್ಮ ವಾದ –। ಗಡೆಣೆಯ ಕೇಳುತ

ನುಡಿಮುಂದೊಡದೆ।

ಗಡಗಡ ನಡುಗುತ ಮಾಯ್ಗೋಮಾಯ್ಗಳು ।

ಅಡವಿಯಲಡಗೋರು ನಿಮ್ಮ ಭೀತಿಯಲಿ ॥ ೧ ॥

ಕುಟಿಲಮತಗಳೆಂಬೊ ಚಟುಲಂಧಕಾರಕೆ । ಪಟುತರ ತತ್ವಪ್ರಕಾಶಿಕೆಯೆಂತೆಂಬ ।

ಚಟುಲಾತಪದಿಂದ ಖಂಡಿಸಿ ತೇಜೋ –

ತ್ಕಟದಿ ಮೆರೆದೆ ಬುಧಕಟಕಾಬ್ಜಮಿತ್ರ ॥ ೨ ॥

ಅಮಿತದ್ವಿಜಾವಳಿಕುಮುದಗಳರಳಿಸಿ । ವಿಮತರ ಮುಖ ಕಮಲಂಗಳ ಬಾಡಿಸಿ ।

ಸ್ವಮತರ ಹೃತ್ಸಂತಾಪಗಳೋಡಿಸಿ ।

ವಿಮಲಸುಕೀರ್ತಿಯ ಪಡೆದೆಯೊ ಚಂದ್ರ ॥ ೩ ॥

ವೇದಶಾಸ್ತ್ರಗಳೆಂಬೊ ಶೃಂಗಗಳಿಂದ । ಸುಧಾದಿಗ್ರಂಥಗಳೆಂಬೊ ಸ್ತನದಿಂದೊಪ್ಪುತ ।

ತತ್ವ ಬೋದೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ ।

ಆದರದಲಿಕೊಟ್ಟ ಯತಿಸುರಧೇನು ॥ ೪ ॥

ವ್ಯಾಸಸೂತ್ರಗಳೆಂಬೊ ಮಂದರವನು ವೇದ । ರಾಶಿಯೆಂಬ ವಾರಾಶಿಯೊಳಗಿಟ್ಟು ।

ಶ್ರೀಸರ್ವಜ್ಞರ ವಾಕ್ಯಪಾಶದಿ ಸುತ್ತಿ ।

ಭಾಸುರನ್ಯಾಯಸುಧಾ ಪಡೆದೆ ಯತೀಂದ್ರ ॥ ೫ ॥

ವನಜನಾಭನ ಗುಣಮಣಿಗಳು ಸರ್ವಜ್ಞ - । ಮುನಿಕೃತಗ್ರಂಥಗಳವನಿಯೊಳಗಿರೆ । ಸ -

ಜ್ಜನರಿಗೆ ಟೀಕಾಂಜನದಿಂದ ತೋರಿಸಿ ।

ಘನಸುಖಸಾಧನ ಮಾಡಿದ್ಯೋ ಧೀರ ॥ ೬ ॥

ಅರ್ಥಿಮಂದಾರ ವೇದಾರ್ಥವಿಚಾರ । ಸಮರ್ಥ ಶ್ರೀಕೃಷಪದಾಂಬುಜಲೋಲ । ಪ್ರ-

ತ್ಯರ್ಥಿಮತ್ತೇಭಕಂಠೀರವಾಕ್ಷೋಭ್ಯ - -

ತೀರ್ಥಕರಜ ಜಯತೀರ್ಥಯತೀಂದ್ರ ॥ ೭ ॥

## ವರ್ಣಿಸಲಳವೇ ಗುಣ ಸಾಂದ್ರನಾ

ರಾಗ - ಪೂರ್ವಿ ; ರೂಪಕತಾಳ

ವರ್ಣಿಸಲಳವೇ ಗುಣ ಸಾಂದ್ರನಾ । ಕರ್ಣ ಜನಕ ಕೋಟಿ ತೇಜನಾ ।

ಶ್ರೀಶ ಭಜಕ ಶ್ರೀ ಜಯಮುನೀಂದ್ರನಾ ॥ ಪ ॥

ಮಧ್ವಶಾಸ್ತ್ರ ದುಗ್ಧನಿಧಿಯ । ಬುದ್ಧಿಯೆಂಬ ಮಂದರ ಗಿರಿಯ ।

ಶುದ್ಧಸೂತ್ರ ನೇತ್ರದಿಂದ ಬದ್ಧಮಾಡಿ ಪಿಡಿದು ತಡೆದು ।

ಶುದ್ಧಯುಕುತಿ ಸುಧ ತೆಗೆದನಾ । ಶಿಷ್ಯಜನಕೆ ॥

ಶ್ರದ್ಧೆಯಿಂದ ಅದನು ಎರೆದನಾ । ಕ್ರೋಧದಿಂದ ।

ಕೃದ್ದವಾದಿ ದೈತ್ಯರ ಗೆಲಿದನಾ ಜಯಮುನೀಂದ್ರನ ॥ ೧ ॥

ಮಾನಿನಿಯರ ಶೀಲರಾದೀ ಮಾನವರನು ಜರಿದು ಹರಿಯ ।

ಧ್ಯಾನದಲ್ಲಿ ಮನವ । ನಿಲಿಸಿ । ಒಲಿಸಿ ।

ಹಾನಿಯಿಲ್ಲದ ಮುಕುತಿ ಪಡೆದ ।

ಜ್ಞಾನಮತವ ಜಗಕೆ ಸಾರ್ದನಾ । ಶಿಷ್ಯ ಜನಕೆ ॥

ಸಾನುರಾಗದಿ ತತ್ತ್ವ ಪೇಳ್ದನಾ ಜಯಮುನೀಂದ್ರನ ॥ ೨ ॥

ಸರಸದಿಂದ ಮೂರು ಏಳು । ವಿರಸ ದುಷ್ಟ ಭಾಷ್ಯಗಳನು ।

ತರಿದ ಅಕ್ಷೋಭ್ಯತೀರ್ಥಕರಜನಾ ॥

ಶಿಷ್ಯ ಜನರ ದುರುಳ ಮೋಹ ತಿಮಿರ ದಿನಪನಾ ।

ನಮ್ಮ ಪರಮಗುರು ಶ್ರೀಕೃಷ್ಣನ ಪಾದಭಜತನಾ ॥ ೩ ॥

। ಜಯಜಯ ಜಯಜಯ ಜಯರಾಯಾ ।

ರಾಗ – ಅರಬಿ ; ಆದಿತಾಳ

ಜಯಜಯ ಜಯಜಯ ಜಯರಾಯಾ ।

ದಯದಿ ಪಾಲಿಸೋ ಮಹರಾಯಾ ನೀ

ದಯದಿಂ ಪಾಲಿಸೋ ಮಹರಾಯಾ ॥ ಪ ॥

ಪ್ರತಿಜನ್ಮದಿ ತ್ವಚ್ಚರ್ಣದಲಿ । ಸದ್ಗತಿಯನಿತ್ತು ಕಾಯೋ ಕರುಣದಲಿ ।

ಸನ್ಮತಿವಂತರಲಿಡೋ ನಿರುತದಲಿ ॥

ಅತಿಬಲ ಹೃದ್ಗರ ತಡೆವಳಿದು ।ಉನ್ನತಿಯನ ಕೊಡು ಸನ್ನುತ ಮಹಮಹಿಮಾ ॥ ೧ ॥

ಅಚ್ಯುತ ಪದಾಂಭುಜ ಭೃಂಗಾ । ನಿನ್ನರ್ಚನೆಯ ಕೊಡೋ ಕೋಮಲಾಂಗಾ ।

ತ್ವಚ್ಚರಿತೆಯ ತೋರೋ ಗುಣಪಾಂಗಾ ॥

ಪ್ರಚ್ಛಾತದೂಷಣೆ ಸಚ್ಚಿದ್ಭೂಷಣೆ । ಮೆಚ್ಚಿಪೆ ನಾ ನಿನ್ನ ಮುನಿತುಂಗಾ ॥ ೨ ॥

ವೃಂದಾರಕ ವೃಂದಾರಾಧ್ಯ । ಅಂದಗಂಧ ತುಜನಾಧ್ಯ ।

ನಂದತೀರ್ಥರ ಮತಬೋದ್ಯ ॥

ಸುಂದರ ತಾಂಡವ ನಿಂದಿಹ ಕೃಷ್ಣನ । ವಂದಿಪ ಸದ್ಗುರು ನಿರವದ್ಯ ॥ ೩ ॥

ಭಳಿರೆ ಭಳಿರೆ ನಿನ್ನ ಗುಣಗಳ ತುತಿಸುವೆ

ರಾಗ – ತೋಡಿ – ತ್ರಿಪುಟತಾಳ

ಭಳಿರೆ ಭಳಿರೆ ನಿನ್ನ ಗುಣಗಳ ತುತಿಸುವೆ ।

ಜಲದಿ ಸಮಗಾಂಭೀರ್ಯ ಜಯತೀರ್ಥವರ್ಯ ॥ ಪ ॥

ಆವಾವ ಪರಿಯಲ್ಲಿ ಹಯಗ್ರೀವ ಮೂರ್ತಿಯ ಪದವ

ತವಕದಿ ಚಿಂತಿಪ ವರಚಿಂತಾಮಣಿಯೇ ॥

ಪಾವನ ಗುರು ಶ್ರೀಮದಾನಂದತೀರ್ಥರ ।

ಭಾವನೆಗಳನೆ ಪೇಳಿಕಾವಸುಜನರನ್ನು ॥ ೧ ॥

ಮಧ್ವರಾಯರು ಬಂದು ನಿನ್ನೊಳಗೆ ನಿಂದಿರಲು ।

ಭೋದಮಯ ಸಿದ್ಧಾಂತ ಮತವನುದ್ಧರಿಸಿದ್ಯೋ ॥

ಅದ್ವೈತ ಮಾಯ್ಗ್ಗಳ ಭೇದಿಸಿಜರೆವಂಥ ।

ಉದ್ಯೋಗದಲ್ಲಿದು ಉದ್ದಾರಮಾಡಿದ್ಯೋ ॥ ೨ ॥

ನಿನ್ನ ಕೃತಿಯೊಳಂಜನ ದೃಷ್ಟಿಯಿಟ್ಟು ।

ಸನ್ಯಾಯ ವಿವೃತಿ ಮತಭೇದಗಳಲಿ ॥

ಪನ್ನಗಶಯನನ ಭಕ್ತಿಯ ಜನರಿಗೆ ।

ಪ್ರಸನ್ನವನೆ ಮಾಡಿ ಪುರುಷಾರ್ಥಗಳನಿತ್ಯೋ ॥ ೩ ॥

ಭುದರು ನಿಮ್ಮ್ರಯ ನ್ಯಾಯಾಸುಧಾಶ್ರವಣ ಸವಿದು ।

ಮುದವಿ ಮೋಹಂಗಳ ಜರಿದು ನಿನ್ನ ॥

ಪದ್ಧತಿಯನು ತಿಳಿದು ಮುದ್ದುಕೃಷ್ಣನ ಪದವ ।

ಬದ್ದದಿಂದೆದಿಸುವೆ ಪ್ರಸಿದ್ಧನಾದ ಗುರುವೆ ॥ ೪ ॥

ಬರಿಮಾತುಗಳಿಂದ ಬಂದ ವಿದ್ಯಾರಣ್ಯನ ।

ಮರುಳ ಮಾಡಿದ ಗ್ರಂಥ ಕರುಣದಿಂದ ॥

ನರರನರಿಗಳ ಮಾಡಿದಾಶ್ಚರ್ಯ ಕಾರಣ ।

ಪುರುಷ ಹಯವದನನ ಪಾದಸರಸಿಜ ಭೃಮರ ॥ ೫ ॥

## ಸಾರಿ ಭಜಿಸಿರೋ ಟೀಕರಾಯರಂಘ್ರಿಯ

ಸಾರಿ ಭಜಿಸಿರೋ ಟೀಕರಾಯರಂಘ್ರಿಯ ॥ ಪ ॥

ಜಯ ರಾಯರಂಘ್ರಿಯ । ಘೋರಪಾತಕಾಂಬುಧಿಯ ಪಾರಮಾಳ್ಪರ ॥ ಅ । ಪ ॥

ಮೋದತೀರ್ಥರ ಮತವ ಸಾಧಿಸುವರ । ಪಾದಸೇವ್ಯರದುರ್ಬೋಧ ಕಳೆವರ ॥ ೧ ॥

ಭಾಷ್ಯತತ್ವವ ವಿಸ್ತಾರ ಮಾಳ್ಪರ । ದೋಷದೂರರ ಆದಿಶೇಷವೇಶರ ॥ ೨ ॥

ಕಾಮಗೆದ್ದರ ಹರಿಗೆ ಪ್ರೇಮಪೂರ್ಣರ । ನೇಮ ನಿತ್ಯರ ನಿಷ್ಕಾಮನಾಪರ ॥ ೩ ॥

ಮೋಕ್ಷದಾತರ ಅಕ್ಷೋಭ್ಯತೀರ್ಥರ । ಸಾಕ್ಷಿಯಿಪ್ಪರ ಅಪೇಕ್ಷೆರಹಿತರ ॥ ೪ ॥

ವಿಜಯವಿಠಲನ ಅಂಘ್ರಿ ಭಜನೆಮಾಳ್ಪರ ।ಕುಜನಭಂಜರ ದಿಗ್ವಿಜಯರಾಯರ ॥ ೫ ॥

## ಜಯರಾಯರ ನೋಡಿರೋ ಸಜ್ಜನರೆಲ್ಲ

ರಾಗ – ಕಲ್ಯಾಣಿ

ಜಯರಾಯರ ನೋಡಿರೋ ಸಜ್ಜನರೆಲ್ಲ । ಜಯರಾಯರ ನೋಡಿರೋ ॥ ಪ ॥

ಜಯರಾಯರ ನೋಡಿ ಜಪಿಸಿ ಮನದಿ ಪಾಡಿ ।

ಜಯವಾಗುವುದು ನಿಮಗೆ ಭಯನಾಶ ಸತತ ॥ ಅ । ಪ ॥

ದುರುಳಮತವೆಂಬೊ ಕರಿಗೆ ಅಂಕುಶವಿತ್ತು । ಸರಸಾದಗ್ರಂಥ ಆನಂದಮುನಿ ॥

ವಿರಚಿಸಿ ಇರಲಾಗಿ ಪರಮ ಭಕ್ತಿಯಿಂದ ।ವಿಸ್ತಾರಮಾಡಿದ ಕರದಕನ್ನಡಿಯಂತೆ ॥೧ ॥

ವಾದಿಗಳನೆಲ್ಲ ಜಯಿಸಿ ಡಂಗುರ ಹೊಯ್ಸಿ । ಭೇದಾರ್ಥಜ್ಞಾನ ಸತ್ಯವೆನಿಸಿ ॥

ಈ ಧರೆಯೊಳಗೆ ಹರಿಯೇ ಪರದೈವವೆಂದು ।

ಸಾಧಿಸಿ ಉದ್ದಂಡನಾದ ಯತಿಕುಲತಿಲಕ ॥ ೨ ॥

ಅಕ್ಷೋಭ್ಯತೀರ್ಥರ ಕರದಿಂದ ಜನಿಸಿ । ಮೋಕ್ಷಕ್ಕೆ ಜಯಪತ್ರಿಕೆಯ ಕೊಡಿಸಿ ॥

ಪಕ್ಷೀವಾಹನ ಸಿರಿವಿಜಯವಿಠ್ಠಲನ್ನ । ಈಕ್ಷಿಸುವುದಕೆ ಉಪದೇಶ ಕೊಡುವ ಋಷಿ ॥ ೩ ॥

## ಟೀಕಾಚಾರ್ಯರ ಪಾದ ಸೋಕಿದ ಕೊನೆಧೂಳಿ

ರಾಗ – ಆನಂದಭೈರವಿ

ಟೀಕಾಚಾರ್ಯರಪಾದ ಸೋಕಿದಕೊನೆಧೂಳಿ ತಾಕಿದಮನುಜರಿಗೆ ।

ಕಾಕುಗೊಳಿಸುತಿಪ್ಪಾನೇಕತಾಪಂಗಳ ನೂಕಿಬಿಸಾಡುವ ಸಾಕುವದೊರೆ ನೀನು ॥ ಅ।ಪ ॥

ಮಧ್ವಮತವೆಂಬೊ ದುಗ್ಧಾಬ್ಧಿಯೊಳಗೆ । ಉದ್ಭವಿಸಿದ ಚಂದ್ರಮನೋ ॥

ಅದ್ವೈತವಿಪಿನ ಭೇದನಕುಠಾರ । ವಿದ್ಯಾರಣ್ಯರ ಗರ್ವಕ್ಕೆ ಪರಿಹಾರ ॥ ೧ ॥

ತತ್ವನುಡಿಸಲು ತತ್ವಸುಧಾ ಭಾಷ್ಯ । ವಿಸ್ತರಿಸಿದ ಚಂದ್ರನೋ ॥

ಚಿತ್ತದೊಲ್ಲಭನ ಸ್ಮರಣೆಯ ಮಾಡಿ ಟೀಕಂಗಳ ।

ಸುತ್ತೇಳು ಲೋಕಕ್ಕೆ ಪ್ರಕಟಿಸಿ ಮೆರೆದಂಥ ॥ ೨ ॥

ಎಂದಿಗಾದರು ಒಮ್ಮೆ ಕೊನೆನಾಲಿಗೆಯಿಂದ । ಬಿಂದು ಮಾತ್ರದಿ ನೆನೆಯೆ ॥

ಮಂದಮತಿಗಾದರು ಅಜ್ಞಾನನಾಶನ । ಸಂದೇಹವಿಲ್ಲವು ಆವಾವಕಾಲಕ್ಕೆ ॥ ೩ ॥

ಜ ಯೆಂದು ನುಡಿಯಲು ಜಯಶೀಲನಾಗುವ ।

ಯ ಯೆಂದು ನುಡಿಯಲು ಯಮನಂಜುವ ॥

ತೀ ಯೆಂದು ನುಡಿಯಲು ತಿಮಿರ ಪಾತಕಹಾನಿ ।

ರ್ಥ ಯೆಂದು ನುಡಿಯಲು ತಾಪತ್ರಯ ಪರಿಹಾರ ॥ ೪ ॥

ಯೋಗಿಅಕ್ಷೋಭ್ಯರ ಕರಕಮಲಸಂಜಾತ । ಭಾಗವತರ ಪ್ರೀಯನೇ ॥

ಯೋಗಿಗಳರಸನೆ ಮಳಖೇಡನಿವಾಸ । ಕಾಗಿನೀತಟವಾಸ ವಿಜಯವಿಠ್ಠಲದಾಸ ॥ ೫ ॥

## ಜಯತೀರ್ಥ ಗುರುರಾಯಾ ಕವಿಗೇಯ

ರಾಗ – ಮಧ್ಯಮಾವತಿ ಆದಿತಾಳ

ಜಯತೀರ್ಥ ಗುರುರಾಯಾ ಕವಿಗೇಯ ।

ಪಾದದ್ವಯಕಭಿನಮಿಸುವೆನುಶುಭಕಾಯ ॥ ಪ ॥

ಭಯಹರ ಕರುಣಾ ನಯದಿ ದಿನ ದಿನ ।

ವಯನವೆ ಪಾಲಿಸು ಬಯಸುವೆ ಇದನೆ ॥ ಅ । ಪ ॥

ಎಂದೆಂದು ನಿನ್ನಪಾದ ಪೊಂದಿದವರ ಪಾದ ।

ದ್ವಂದ್ವಾರಾಧಕರ ಸಂಬಂಧಿಗರಾನೆಂದು ಪಾಲಿಸೊಕಾರುಣ್ಯ ಸಾಗರ ।

ಮಂದನು ನಾ ಕರ್ಮಂದಿಗಳರಸನೆ ।

ಮುಕುಂದನ ತೋರ್ಮನಮಂದಿರದೊಳು ನೀ ॥ ೧ ॥

ಹರಿಪಾದಾಂಬುಜ ಸಕ್ತ ಭಕ್ತಜನ ।

ಪರಿಪಾಲಿಪ ಸಮರ್ಥ ಅಕ್ಷೋಭ್ಯತೀರ್ಥ ಕರಕಮಲ ಸಂಜಾತಾ ಆನಂದದಾತಾ ।

ಪರಮಹಂಸಕುಲವರನೆ ವಂದಿಸುವೆನು ।

ಕರುಣದಿಂದಲಿ ಎನಗರುಪು ಸುತತ್ವ ॥ ೨ ॥

ಕಾಮಿತ ಫಲದಾತಾ ಜಗನ್ನಾಥ ವಿಠಲನ ಪರಮದೂತಾ ಪ್ರಖ್ಯಾತಾ ।

ಶ್ರೀಮಧ್ವಮತಾಂಭುರುಹ ಪ್ರದ್ಯೋತ ।

ತಾಮಸಮತಿ ಕಳೆದೀಮಹೀಸುರರಾ ।ಮಹಾಮಹಿತರ ಮಾಡಿದೆ ಮುನಿವರ್ಯ ॥೩॥

## ಜಯರಾಯ ಜಯರಾಯ

ರಾಗ – ಪಂತುವಾಳಿ ; ಆದಿತಾಳ

ಜಯರಾಯ ಜಯರಾಯ ॥ ಪ ॥

ದಯವಾಗೆಮನನುದಿ ಸುಪ್ರೀಯ ॥ ಅ । ಪ ॥

ವಿದ್ವನ್ಮಂಡಲ ಸದ್ವಿನುತನೆ ಪಾ । ದದ್ವಯಕೆರಗುವೆ ಉದ್ಧರಿಸೆನ್ನನು ॥ ೧ ॥

ಗುರುಪೂರ್ಣಪ್ರಜ್ಞರ ಸನ್ಮತ ಉ । ದ್ಧರಿಸಿ ಮೆರೆದೆ ಭೂಸುರವರವರದ ॥ ೨ ॥

ಸುರನಾಥನೆ ನೀ ನರನಾವೇಷದಿಂ । ಧರಣಿಯೊಳಗವತರಿಸಿದೆ ದಯದಿ ॥ ೩ ॥

ವಿದ್ಯಾರಣ್ಯನಾವಿದ್ಯಮತದ ಪ್ರ । ಸಿದ್ಧಾಂತಗಳ ಅಪದ್ಧವೆಂದೆನಿಸಿದೆ ॥ ೪ ॥

ಸಭ್ಯರ ಮಧ್ಯದೊಳತ್ಯಧಿಕ ವರಾ । ಕ್ಷೋಭ್ಯ ಮುನಿಕರಾಬ್ಜಾಭ್ಯುದಿತ ಗುರು ॥ ೫ ॥

ಅವಿದಿತನ ಸತ್ಕವಿಗಳ ಮಧ್ಯದಿ । ಸುವಿವೇಕಿಯ ಮಾಡವನಿಯೊಳೆನ್ನನು ॥ ೬ ॥

ನಿನ್ನವನು ನಾನನ್ಯನಲ್ಲವೊ ಜ । ಗನ್ನಾಥ ವಿಠಲನ ಎನ್ನೊಳಗಿರಿಸೊ ॥ ೬ ॥

## ದಯದಿ ಪಾಲಿಸೋ ಜಯತೀರಥರಾಯ

### ರಾಗ – ಮೋಹನ

ದಯದಿಪಾಲಿಸೋ ಜಯತೀರಥರಾಯ ಅಕ್ಷೋಭ್ಯರ ತನಯ ।

ದಯದಿಪಾಲಿಸೋ ಜಯತೀರಥರಾಯ ॥ ಪ ॥

ಅತ್ಯಂತ್ಹರುಷದಿ ಎತ್ತಾಗಿರುತಿರಲು ಆನಂದತೀರ್ಥರು ।

ನಿತ್ಯ ಪಠಿಸುವ ಪುಸ್ತಕ ಹೊರುತಿರಲು । ಗುರುರಾಯರು ಪೇಳಿದ ।

ತತ್ವಗ್ರಂಥವನೆ ಕಿವಿಯಲಿ ಕೇಳುತಲಿ, ತಲೆಯತೂಗುತಲೀ ।

ಮತ್ತೆಪುಟ್ಟಿದೆಯೊ ಮಂಗಳವೇಡೆಯಲಿ, ಅತಿಮತಿವಂತರಲೀ ॥ ೧ ॥

ದೇಶಪಾಂಡೆಯರ ಕೂಸಾಗಿ ಜನಿಸಿ, ಘನರಾವುತನೆನಿಸಿ ।

ದೇಶ ದೇಶದೊಳು ಸೈನ್ಯವನೆ ಚರಿಸಿ, ಹಣವನ್ನೆಗಳಿಸಿ ॥

ವಾಸವಿಯೆಂಬೊ ಗುರುತನೆತಪ್ಪಿಸಿ, ನದಿಗೆ ನೀರಡಿಸಿ ।

ಶ್ರೀಶನಾಜ್ಞೆಯಿಂ ಇವರನೆ ಕರೆತರಿಸಿ, ಶಿಖಿಸೂತ್ರ ತೆಗೆಸಿ ॥ ೨ ॥

ಹಿಂಡುಹಿಂಡುಜನ ಅಂಡಲೆಯುತ ಬರಲು, ಅಕ್ಷೋಭ್ಯತೀರ್ಥರ

ಕಂಡು ಭೇಟಿಯ ಮಾಡುತಲಿನಿಂದು,  ಧೋಂಡುರಘುನಾಥನು ।

ಹೆಂಡತಿ ಗಂಡನ ಕೂಡಿಸಬೇಕೆಂದು , ಸುಮ್ಮನೆಕರೆತಂದು ।

ಪ್ರಚಂಡಸರ್ಪವ ರೂಪವನೇ ತಾಳ್ದು, ಭಯವ ಪಟ್ಟರಂದು ॥ ೩ ॥

ಮಧ್ವಶಾಸ್ತ್ರಗಳನುದ್ಧರೆಸುತಲದಕೆ, ಟೀಕೆಯನೇ ಮಾಡಿ।

ವಿದ್ವಜ್ಜನರಿಗೆ ತಿದ್ದಿಯೆಪೇಳುತಲಿ, ನಾನಾಬಗೆಯಲ್ಲಿ ।

ಪದ್ಧತಿ ತಿಳಿಸಿದ ಗುರುರಾಯರು ನೀವು, ಯತಿವರಸುರಧೇನು ।

ಅದ್ವೈತರಗುರು ವಿದ್ಯಾರಣ್ಯರ ಗೆದ್ದ, ಸಿಂಹ ನೀನು ॥ ೪ ॥

ಆಶಾಢಬಹುಳ ಪಂಚಮಿಯು ಬರಲು, ಕಳೆಬರವನೆ ಬಿಡುತ ।

ವ್ಯಾಸವಿಠ್ಠಲನ ಪಾದದಲೇನಿರುತ, ಮಳಖೇಡದೊಳು ಸತತ ।

ವಾಸಿಪ ಪಾವಿನತೆರದೊಳ ಪ್ರಖ್ಯಾತ, ನಿಜಗುಣಗಣನೀತ ।

ಬೇಸರದಲೆ ಕೊಂಡಾಡಿದರೆ ನಿತ್ಯ, ಇಷ್ಟಾರ್ಥವ ನೀವ ॥ ೫ ॥

## ನೋಡು ನೋಡು ಟೀಕಾರಾಯರ

ರಾಗ – ಜಂಝೂಟಿ; ಆದಿತಾಳ

ನೋಡು ನೋಡು ಟೀಕಾರಾಯರ ॥ ಪ ॥

ಮಾಡು ಮಾಡು ವಂದನೆಗಳಾ । ಬೇಡು ಬೇಡು ವರಗಳನ್ನ ॥ ಅ । ಪ ॥

ದುರ್ಮಾಯಿ ಮತಗಳ ಮರ್ಮ ಭೇದಿಸಿ । ಸುಧಾ

ನಿರ್ಮಾಣ ಮಾಡಿದ ಸನ್ಮಾನ್ಯರ ॥ ೧ ॥

ಲಲಿತೋರ್ಧ್ವಪುಂಡ್ರ ಶ್ರೀ ತುಳಸಿ ಭೂಷಿತ ಕರ್ಣ ।

ವಿಲಸಿತ ಕಾಷಾಯಧಾರ್ಯರಾ ॥ ೨ ॥

ಯಾವಾಗಲೂ ವಾಸುದೇವವಿಠಲನ್ನ ।

ಸೇವಿಸಿ ಭಜಿಸುವರಾ ಗುರುವರರಾ ॥ ೩ ॥

## ಜಯತೀರ್ಥ ಜಯತೀರ್ಥ

ರಾಗ – ಪೂರ್ವಿ ; ಅಟತಾಳ

ಜಯತೀರ್ಥ ಜಯತೀರ್ಥ ॥ ಪ ॥

ದಯವಾರಿಧಿ ಭವಭಯಹರ ಗುರುವರ ॥ ಅ । ಪ ॥

ಕಾಗಿಣಿತಟಸ್ಥಿತ ಮೇಘನಾಥಪುರ । ಆಗರವೆನಿಸಿದ ಯೋಗಿವರೇಣ್ಯ ॥ ೧ ॥

ತತ್ವಗಳರ್ಥದ ಪುಸ್ತಕಭಾರವ । ಎತ್ತಿನ ರೂಪದಿ ಪೊತ್ತ ಮಹಾತ್ಮಾ ॥ ೨ ॥

ಮರುತಶಾಸ್ತ್ರಕೆ ವಿರಚಿಸಿ ಟೀಕೆಯ । ಮುರಿದು ಕುಭಾಷ್ಯವ ಮೆರೆದ ಮಹಂತ ॥ ೩ ॥

ನೆರೆನಂಬಿದೆ ಶ್ರೀನರಹರಿನಾಮವ । ನಿರುತಗರೆದು ಪೊರಿ ನರನವತಾರಿ ॥ ೪ ॥

ಭೀಮಭವಾಟವಿ ಧೂಮಕೇತು ಶ್ರೀ । ಶ್ಯಾಮಸುಂದರನ ಪ್ರೇಮದ ದಾಸ ॥ ೫ ॥

॥ ಶ್ರೀಜಯತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥